# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

## ಸಿ.ಸಿ.649/2025

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ವಿಮಲ್ ಕುಮಾರ್ ವಿ | ಚಾಸಾಃ **3** | ಪ್ರಾಸಾಃ **2** |
| ತಂದೆಯ ಹೆಸರು | : | ವಿಶ್ವನಾಥ | | |
| ವಯಸ್ಸು | : | **42** ವರ್ಷ | | |
| ವೃತ್ತಿ | : | ಅಬಕಾರಿ ಉಪನಿರೀಕ್ಷಕರು | | |
| ವಾಸಸ್ಥಳ | : | ಮುಳಬಾಗಿಲು | | |

ದಿನಾಂಕಃ **13-03-2026** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದಃ

ನಾನು ದಿಃ 05-02-2024 ರಿಂದ ದಿಃ 23-11-2025 ರವರೆಗೆ ಹೊನ್ನಾಳಿ ವಲಯದಲ್ಲಿ ಅಬಕಾರಿ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೆನು.

ದಿನಾಂಕಃ 19-10-2024 ರಂದು ಚಾಸಾ-1 ರವರ ಜೊತೆಯಲ್ಲಿ ನಾನು ಕೂಲಂಬಿ ಗ್ರಾಮದಲ್ಲಿ ಸಂಜೆ 04-30 ಗಂಟೆ ಸಮಯದಲ್ಲಿ ಗಸ್ತು ಮಾಡುತ್ತಿದ್ದಾಗ ಚಾಸಾ-1 ರವರಿಗೆ ಬನ್ನಿಕೋಡು ಗ್ರಾಮದ ಬಸ್ ನಿಲ್ದಾಣ ದ ಬಳಿ ಒಬ್ಬ ಆಸಾಮಿಯು ಅಕ್ರಮವಾಗಿ ಮದ್ಯವನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾರೆ ಎಂದು ಖಚಿತ ಮಾಹಿತಿ ಬಂದ ಮೇರೆಗೆ ನಂತರ ಕೂಲಂಬಿ ಬಸ್ ನಿಲ್ದಾಣ ದ ಬಳಿ ಇದ್ದ ಚಾಸಾ-2 ರವರಿಗೆ ಸದರಿ

ಮೇಲ್ಕಂಡ ಮಾಹಿತಿಯನ್ನು ತಿಳಿಸಿ ನಂತರ ಚಾಸಾ-1 ರವರು ಚಾಸಾ-2 ರವರಿಗೆ ನೋಟೀಸನ್ನು ಜಾರಿ ಮಾಡಿ ಅವರನ್ನು ನಮ್ಮ ಇಲಾಖೆಯ ಜೀಪಿನಲ್ಲಿ ಮಾಹಿತಿ ಬಂದ ಸ್ಥಳಕ್ಕೆ ಹೋಗಿ ನೋಡಲಾಗಿ ಸದರಿ ವ್ಯಕ್ತಿಯು ನಮ್ಮನ್ನ ನೋಡಿ ಓಡಿ ಹೋಗಲು ಪ್ರಯತ್ನಿಸಿದರು ಆ ಸಮಯದಲ್ಲಿ ನಾನು ಮತ್ತು ಚಾಸಾ-1 ರವರು ಸದರಿ ವ್ಯಕ್ತಿಯನ್ನು ಹಿಡಿಯಲು ಪ್ರಯತ್ನಿಸಿದರು ಸದರಿ ವ್ಯಕ್ತಿ ಸಿಕ್ಕಿರುವುದಿಲ್ಲ. ನಂತರ ಸ್ಥಳೀಯರನ್ನು ವಿಚಾರಿಸಲಾಗಿ ಅವನ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ಪವನ್ ಕುಮಾರ್ ಟಿ ಜಿ ಬಿನ್ ಗದಿಗೆಪ್ಪ, ಬನ್ನಿಕೋಡು ಗ್ರಾಮದ ವಾಸಿ ಎಂದು ತಿಳಿಸಿದರು. ನಂತರ ಸದರಿ ಚೀಲವನ್ನು ಪರಿಶೀಲನೆ ಮಾಡಲು ಶೋಧನಾ ಸಮುಚ್ಚಿತ್ತ ವಾರೆಂಟನ್ನು ಚಾಸಾ-1 ರವರು ತಯಾರಿಸಿ ನಂತರ ಸ್ಥಳದಲ್ಲಿದ್ದ ಬಿಳಿ ಬಣ್ಣದ ಪ್ಲಾಸ್ಟೀಕ್ ಚೀಲವನ್ನು ಪರಿಶೀಲಿಸಿ ನೋಡಲಾಗಿ ಅದರಲ್ಲಿ 90 ಎಂ ಎಲ್ ನ ಹೈವರ್ಸ್ಡ್ ಚಿಯರ್ಸ್ ವಿಸ್ಕಿಯ 45 ಟೆಟ್ರಾ ಪ್ಯಾಕೇಟ್ ಗಳು ಇದ್ದವು. ನಂತರ ಚಾಸಾ-1 ರವರು ಸದರಿ ಮದ್ಯದ ಪೌಚ್ ಗಳನ್ನು ಅಮಾನತ್ತು ಪಡಿಸಿಕೊಳ್ಳಲು ಅಮಾನತ್ತು ಮಹಜರ್ ಕ್ರಮವನ್ನು ಚಾಸಾ-1 ರವರು ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಸಂಜೆ 05-10 ರಿಂದ 06-10 ಗಂಟೆ ಸಮಯದಲ್ಲಿ ಜರುಗಿಸಿ ಚಾಸಾ-1, ನಾನು ಮತ್ತು ಚಾಸಾ-2 ರವರು ಸಹಿಯನ್ನು ಮಾಡಿರುತ್ತೇವೆ. ನಂತರ ಸದರಿ 96 ಮದ್ಯದ ಟೆಟ್ರಾ ಪ್ಯಾಕೇಟ್ ಗಳಲ್ಲಿ 45 ಟೆಟ್ರಾ ಪ್ಯಾಕೇಟ್ ಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಬಿಳಿಚೀಲದಲ್ಲಿ ಹಾಕಿ ಎಸ್ ಹೆಚ್ ಓ ಎಂದು ಅರಗು ಸೀಲು ಮಾಡಿ ನನ್ನ ಮತ್ತು ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತೇವೆ. ನಂತರ ಠಾಣೆಗೆ ವಾಪಾಸ್ಸು ಬಂದು ಈ ಬಗ್ಗೆ ಚಾಸಾ-6 ರವರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ದಿಃ 28-10-2024 ರಂದು ಚಾಸಾ-6 ರವರ ಆದೇಶದ ಮೇರೆಗೆ ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ಮದ್ಯದ ಪೌಚ್ ಗಳನ್ನು ರಾಸಾಯನಿಕ ಪರೀಕ್ಷೆಗೆ ತೆಗೆದುಕೊಂಡು ಹೋಗಿ ದಿಃ 29-10-2024 ರಂದು ವರದಿಯೊಂದಿಗೆ ಚಾಸಾ-6 ರವರ ಮುಂದೆ ಹಾಜರುಪಡಿಸಿ ಈ ಬಗ್ಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿ ಮತ್ತು ಮು.ಮಾ.1 ಅನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಸ್ಥಳ ಮಹಜರ್ ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲು :- ಆರೋಪಿ ಪರ ವಕೀಲರರಿಂದ :-

ಈ ಪ್ರಕರಣದಲ್ಲಿ ಆರೋಪಿಯು ಮದ್ಯವನ್ನು ಮಾರಾಟ ಮಾಡುವ ಬಗ್ಗೆ ಯಾವುದೇ ಮಾಹಿತಿಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಮ್ಮ ಠಾಣೆಯಲ್ಲಿ ಮಹಜರ್ ಕ್ರಮವನ್ನು ಜರುಗಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗೂ ಮು.ಮಾ.1 ಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ನಮ್ಮ ಠಾಣೆಯಲ್ಲಿದ್ದ ಬೇನಾಮಿ ಮಾಲನ್ನು ಈ ಪ್ರಕರಣದಲ್ಲಿ ಸೇರಿಸಿ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ಮದ್ಯದ ಪೌಚ್ ಗಳನ್ನು ರಾಸಾಯನಿಕ ಪರೀಕ್ಷೆಗೆ ತೆಗೆದುಕೊಂಡು ಹೋಗಿ ವರದಿಯೊಂದಿಗೆ ಚಾಸಾ-6 ರವರ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ಸಾಮಾನ್ಯವಾಗಿ ಎಲ್ಲಾ ಮದ್ಯದ ಅಂಗಡಿಗಳಲ್ಲಿ ದೊರೆಯುತ್ತದೆ ಎಂದರೆ ಸರಿ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಸುಳ್ಳು ಹೇಳಿಕೆಯನ್ನು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾಖಲೆಗಳನ್ನು ಈ ಪ್ರಕರಣಕ್ಕೋಸ್ಕರ ನಮ್ಮ ಕಚೇರಿಯಲ್ಲಿಯೇ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ .

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.